ನಾಲ್ಕನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಯಂ ಅತಿಕ್ರಮಣ

೧೫೯. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರ ಮೇಲೆ ಆಗಿರುವ ಅತಿಕ್ರಮಣಗಳೆನ್ನೆ ತಡೆಗಟ್ಟಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು?

ಆ) ಹೆದ್ದಾರಿಯ ಅಗಲದ ಪ್ರಕಾರ ಅಳತೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಹೆದ್ದಾರಿಯನ್ನು ಸುವ್ಯವಸ್ಥಿತವಾಗಿ ಇಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಣ ಕಾಸಿನ ವ್ಯವಸ್ಥೆಯ ವಿವರವನ್ನೊದಗಿಸುವುದು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ ಮತ್ತು ಆ) ರಾಷ್ಟ್ರೀಯ ಹೆದ್ದಾರಿಗೆ ಸೇರಿದಭೂಮಿಯಂ ಅತಿಕ್ರಮಣವಾಗಿರುವ ಪ್ರಸಂಗಗಳು ಗಮನಕ್ಕೆ ಬಂದಾಗ, ಪೋಲೀಸ್ ಮತ್ತು ರೆವಿನ್ಯೂ ಇಲಾಖೆಯ ಸಹಾಯದಿಂದ ಇವುಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿಗೆ ಸೇರಿದ ಜಮೀನನ್ನು ನಿಖರವಾಗಿ ಗುರುತಿಸಲು ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸೇರಿದ ಜಮೀನನ್ನು ಅಳತೆ ಮಾಡಿ ಗಡಿರೇಖೆಯನ್ನು ಗುರುತಿಸಲು ಈ ಕೆಲಸಗಳಿಗೆಂದೇ ರೆವಿನ್ಯೂ ಸರ್ವೆಯರ್‌ಗಳ ಹಂದ್ದೆಗಳನ್ನು ಮಂಜೂರು ಮಾಡಿ ಜಮೀನುಗಳನ್ನು ಅಳತೆ ಮಾಡಿಸಲಾಗುತ್ತಿದೆ. ಅತಿ-ಕ್ರಮಣವಾಗಿರುವುದು ಕಂಡು ಬಂದರೆ ಅವುಗಳನ್ನು ತೆರವು ಮಾಡಲು ಕಾನೂನಿ ರೀತ್ಯಾ ಕ್ರಮ ತೆಗೆದುಕೊಳ್ಳಲಾಗುವುದು.

ಇ) ರಾಷ್ಟ್ರೀಯ ಹೆದ್ದಾರಿಗಳು ಮಂತ್ರಿ ಕಾರ್ಪೊರೇಷನ್ ಮುನಿಸಿಪಲ್ ಸರಹದ್ದಿನೊಳಗೆ ಹಾದಂ ಹೋಗುವ ರಾಷ್ಟ್ರೀಯ ಹೆದ್ದಾರಿಯ ಭಾಗಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೊಡುವ ನಿಧಿಯಿಂದ ನಿರ್ವಹಿಸುತ್ತಿದೆ. ಇದರ ವಿವರಗಳು ಕೆಳಕಂಡಂತಿವೆ.

೧೯೮೭-೮೮ರ ಅನುದಾನ (ಲಕ್ಷ ರೂ. ಗಳಲ್ಲಿ)

ಕ್ರಮ ಸಂಖ್ಯೆ	ಯಾವುದಕ್ಕಾಗಿ ಕೊಡಲ್ಪಟ್ಟಿದೆ	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ
೧	ನಿರ್ವಹಣೆ ಮತ್ತು ದುರಸ್ತಿಗಾಗಿ	೪೨೨.೬೯	೭೫.೦೦

ವಿತ ನೀರಾವರಿ ನಿಗಮಗಳಲ್ಲಿ ಸಿಬ್ಬಂದಿಯ ನೇಮಂಕದ ಬಗ್ಗೆ

೨೬೬. ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಂ ವಿತ ನೀರಾವರಿ ನಿಗಮಂಕ್ಕಾಗಿ (ಲಿಫ್ಟ್ ಇರಿಗೇಶನ್ ನಿಯಂಮಿತ) ಎಷ್ಟು ಜನ ಸಹಾಯಕ ಇಂಜಿನಿಯರ್‌ಗಳಂ ಮತ್ತು ಇತರ ಸಿಬ್ಬಂದಿ ವರ್ಗದವರನ್ನು ಕಳೆದ ೨ ವರ್ಷಗಳಿಂದ ನೇಮಕ ಮಾಡಿಕೊಂಡಿದೆ?

ಆ) ನೇಮಕಾತಿ ಮಾಡಿಕೊಳ್ಳಲು ಯಾವ ಯಾವ ಅರ್ಹತೆ, ರಾಜ್ಯಪತ್ರದಲ್ಲಿ ಪ್ರಕಟಣೆ ಇತ್ಯಾದಿ ನಿಯಮಗಳನ್ನು ಅನುಸರಿಸಲಾಗಿದೆಯೆ?